# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಲಗ್ಗೆರೆ ಉಪವಿಭಾಗ

## ಕೊಟ್ಟಿಗೆಪಾಳ್ಯ ವಾರ್ಡ್ ಸಮಿತಿ ಸಭೆ

ದಿನಾಂಕ:05.10.2020 ರಂದು ಬೆಳಿಗ್ಗೆ 11.00 ಗಂಟೆಗೆ ಶ್ರೀ ವಿಜಯ ಕುಮಾರ್, ಮುಖ್ಯ ಅಭಿಯಂತರರು, ಸಮಿತಿ ಅದ್ಯಕ್ಷರು ರವರ ಅದ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಕೆಗಳು.

ಕಾರ್ಯಸೂಚಿ ವಿಷಯಗಳು:-

ವಾರ್ಡ್-73ರ ಸಾರ್ವಜನಿಕರ ಕುಂದುಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿ ಕುರಿತಂತೆ ಚರ್ಚಿಸಲು ಹಾಗೂ ನಿರ್ಣಯಿಸಲು.

ಸಭೆಗೆ ಹಾಜರಿದ್ದ ಅಧಿಕಾರಿಗಳು:-

1. ಶ್ರೀ. ಎನ್ ಬಸವರಾಜು ಇ.ಇ, ರಾರಾನಗರ, ಶ್ರೀ. ನವೀನ್ ಆರ್, ಸಹಾಯಕ ಅಭಿಯಂತರರು, ಕೊಟ್ಟಿಗೆಪಾಳ್ಯ ವಾರ್ಡ್ ಶ್ರೀ ವಿ. ಚೆಲುವರಾಜು, ಪ್ರ.ದ.ಸ ಲಗ್ಗೆರೆ ಉಪವಿಭಾಗ, ವಿನಾಯಕ್ ಎ.ಇ, ಬಿ ಡ್ಬ್ಲೂ ಎಸ್ ಎಸ್ ಬಿ ಶಂಕರ್ ಲಿಂಗಯ್ಯ, ಸಹಾಯಕ ಅಭಿಯಂತರರು, ಬೆಸ್ಕಾಂ, ಕಾಳಿಂಗ ಮುತ್ತಯ್ಯ (ಎ ಎಸ್ ಐ) ಕಾಮಾಕ್ಷಿಪಾಳ್ಯ ಠಾಣೆ, ಶ್ರೀ.ನಂಜುಂಡಪ್ಪ ಹಿರಿಯ ಆರ್ಯೋಗ್ಯ ಪರಿವೀಕ್ಷಕರು.

2 ಮಾನ್ಯ ಅಧ್ಯಕ್ಷರು ಮತ್ತು ಪಾಲಿಕೆಯ ಮಾಜಿ ಸದಸ್ಯರಾದ ಶ್ರೀ ಮೋಹನ್ ಕುಮಾರ್ ಜಿ. ರವರ ಅನುಮತಿ ಮೇರೆಗೆ ಎಲ್ಲಾ ಸದಸ್ಯರುಗಳಿಗೆ ಹಾಗೂ ಹಾಜರಿದ್ದ ಅಧಿಕಾರಿಗಳ ಜೊತೆ ವಾಡ್.73ರ ವಾರ್ಡ್ ಕಮಿಟಿ ಸಭೆಗೆ ಆಗಮಿಸಿದ್ದ ಸದಸ್ಯ ಕಾರ್ಯದರ್ಶಿರವರು ಉಚ್ಚನ್ಯಾಯಾಲಯದ ಆದೇಶದ ಮೇರೆಗೆ ಪ್ರತಿ ತಿಂಗಳು ವಾರ್ಡ್ ಸಮಿತಿ ಸಭೆಯನ್ನು ನಡೆಸುತ್ತಿದ್ದು ಅದರಂತೆ ಇಂದು ಸಹ ಸಭೆ ನಡೆಸಲಾಗುತ್ತಿದೆ. ಸಭೆಗೆ ಆಗಮಿಸಿದ ಅದ್ಯಕ್ಷರಿಗೆ ಸ್ವಾಗತ ಕೋರಿ ಹಾಗೂ ಸಭೆಗೆ ಅಗಮಿಸಿದ ಬಿಬಿಎಂಪಿ ಸಿಬ್ಬಂದಿ ವರ್ಗದವರಿಗೆ ಬೇರೆ ಬೇರೆ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಆಗಮಿಸಿದ ಸಾರ್ವಜನಿಕರಿಗೂ ಸ್ವಾಗತ ಕೋರಿದ ಕಾರ್ಯದರ್ಶಿಗಳು ಹಾಗೂ ಅಧಿಕಾರಿಗಳಿಂದ ಹಾಜರಾತಿ ಪಡೆದು ಸಭೆ ಪ್ರಾರಂಭಿಸಿದರು. ಹಾಗೂ ವಾರ್ಡ್–73ರ ಸಾರ್ವಜನಿಕರ ಕುಂದುಕೋರತೆಗಳು ಹಾಗೂ ವಾರ್ಡ್ ಅಭಿವೃದ್ಧಿ ಮತ್ತು ಈ ಕೆಳಕಂಡ ವಿವರಗಳನ್ನು ಕುರಿತು ಚರ್ಚಿಸಲಾಯಿತು.

3 ಕಾರ್ಯಪಾಲಕ ಅಭಿಯಂತರರು ಶ್ರೀ ಎನ್.ಬಸವರಾಜು ರವರಿಗೆ ನಾಗರಭಾವಿ 11ನೇ ಬ್ಲಾಕ್ ಹಾಪ್‌ಕಾಮ್ಸ್‌ಯಿಂದ ದೀಪಶ್ರೀ ಆಸ್ಪತ್ರೇ ವರೆಗೆ ಮೋರಿ ಕಲ್ಲು ಹಾಕುವ ಬಗ್ಗೆ. ನಾಗರಭಾವಿ 11ನೇ ಬ್ಲಾಕ್ ದ.ರಾ. ಬೇಂದ್ರೆ ಪ್ರತಿಮೆ ಮತ್ತು ನಾಗರಭಾವಿ 11ನೇ ಬ್ಲಾಕ್ ಸೆಂಟ್ ಸೋಫಿಯಾ ಶಾಲೆ ಮುಂಬಾಗ ರೋಡ್ ಡಿವೈಡ್‌ರ್ ಹೊಸದಾಗಿ ಸ್ಥಾಪಿಸುವ ಬಗ್ಗೆ, ಪಾಪ್‌ರೆಡ್ಡಿಪಾಳ್ಯ ಹತ್ತಿರ ರಬ್ಬರ್ ಮಾದರಿಯಲ್ಲಿ ರಸ್ತೆ ಉಬ್ಬು ಅಳವಡಿಸುವ ಬಗ್ಗೆ. ಪಾಪರೆಡ್ಡಿಪಾಳ್ಯ ಮತ್ತು ರಾಮಕೃಷ್ಣಪ್ಪ ಲೇಔಟ್ ಹತ್ತಿರ ಡೆಬ್ರೀಸ್ ತೆರವುಗೊಳಿಸುವ ಬಗ್ಗೆ. ಮೆಟ್ರೋ ಲೇಔಟ್, ಮುತ್ತುರಾಯಸ್ವಾಮಿ ಬಡಾವಣೆ, ಶ್ರೀನಿವಾಸನಗರದಲ್ಲಿ ನಡೆಯುತ್ತಿರುವ ಕೆ ಆರ್ ಐ ಡಿ ಎಲ್ ಕಾಮಗಾರಿಯನ್ನು ನಿಯಮಾನುಸಾರ ಮೋರಿ ಹೂಳು ತೆಗೆಯುವ ಬಗ್ಗೆ. ನಾಗರಬಾವಿ 11ನೇ ಬ್ಲಾಕ್ 2ನೇ ಹೆಚ್ ಅಡ್ಡರಸ್ತೆಯಲ್ಲಿನ ಕಲ್‌ವರ್ಟ ಅಗತ್ಯವಿರುತ್ತದೆ. ಈ ಮೇಲಿನ ಎಲ್ಲಾ ಸಮಸ್ಯೆಗಳನ್ನು ಅತಿ ಜರೂರಾಗಿ ಬಗೆಹರಿಸಿ ಉತ್ತರ ನೀಡಿ ಎಂದು ಮಾನ್ಯ ಸದಸ್ಯರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಶ್ರೀ ಎನ್.ಬಸವರಾಜು ರವರಿಗೆ ತಿಳಿಸಿರುತ್ತಾರೆ.

4 ಮುಂದುವರೆದು ಘನತ್ಯಾಜ್ಯ ಆರೋಗ್ಯ ಪರಿವೀಕ್ಷಕರು ಶ್ರೀ ನಂಜುಂಡಪ್ಪ ರವರಿಗೆ ಹೊರ ವರ್ತುಲ ರಸ್ತೆ, ಸರ್ವೀಸ್ ರೋಡ್ ಸ್ವಚ್ಛಗೊಳಿಸುವ ಬಗ್ಗೆ, ನಾಗರಬಾವಿ ದೇವಿಶೆಟ್ಟಿಯ ಮನೆಯ ಹತ್ತಿರ ರಸ್ತೆ ಸ್ವಚ್ಛಗೊಳಿಸುವ ಬಗ್ಗೆ, ಬಿ.ಡಿ.ಎ ಕಾಂಪ್ಲೆಕ್ಸ್ ಹತ್ತಿರ ಕೆ.ಎಲ್.ಇ ಕಾಲೇಜ್ ಮುಂಭಾಗ ತರಕಾರಿ ಗಾಡಿಗಳನ್ನು ತೆರವುಗೊಳಿಸುವ ಬಗ್ಗೆ, ಚೌಡೇಶ್ವರಿನಗರ ಪೈಪ್‌ಲೈನ್ ರಸ್ತೆಯಲ್ಲಿ ಕಸಹಾಕುವುದನ್ನು ತಪ್ಪಿಸುವ ಬಗ್ಗೆ. ಜನಶಕ್ತಿ ಸಂಘಟನೆಯವರು ಕೋವಿಡ್ ತಪಾಸಣೆ ಮಾಡಲು ಸಹಬಾಗಿತ್ವ ಕೋರಿರುತ್ತಾರೆ. ಘನತ್ಯಾಜ್ಯ ಆರೋಗ್ಯ ಪರಿವೀಕ್ಷಕರು ಈ ಮೇಲಿನ ಎಲ್ಲಾ ಸಮಸ್ಯೆಗಳನ್ನು ಅತಿ ಜರೂರಾಗಿ ಬಗೆಹರಿಸಿ ಉತ್ತರ ನೀಡಿ ಎಂದು ಅಧ್ಯಕ್ಷರು ಘನತ್ಯಾಜ್ಯ ಆರೋಗ್ಯ ಪರಿವೀಕ್ಷಕರು ಶ್ರೀ ನಂಜುಂಡಪ್ಪ ರವರಿಗೆ ತಿಳಿಸಿರುತ್ತಾರೆ.

5 ಮುಂದುವರೆದು ಬಿ ಡ್ಬ್ಲೂ ಎಸ್ ಎಸ್ ಬಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ವಿನಾಯಕ್ ರವರಿಗೆ 2ನೇ ಸಿ ಮುಖ್ಯರಸ್ತೆ ಗಾಂಧಿ ಪಾರ್ಕ್ ಹತ್ತಿರ ಬೋರ್‌ವೆಲ್ ನೀರು ಉಪಯೋಗಿಸುವ ಬಗ್ಗೆ. ಮುತ್ತುರಯಸ್ವಾಮಿ ಬಡವಣೆ, ಶ್ರೀನಿವಾಸನಗರದ ಹತ್ತಿರ ನೀರಿನ ಟ್ಯಾಂಕರ್‌ಗಳು ವ್ಯಾಪಾರ ಮಾಡುವುದರಿಂದ ರಸ್ತೆಗಳು ಹಾಳಾಗಿರುತ್ತದೆ. ಎಂ.ಆರ್.ಎಸ್ ಬಡಾವಣೆ ಸ್ಯಾನಿಟರಿ ಸಮಸ್ಯೆ ಬಗೆಹರಿಸುವ ಬಗ್ಗೆ. ಮುತ್ತುರಾಯಸ್ವಾಮಿ ಬಡಾವಣೆಯಲ್ಲಿ ಬಿ ಡ್ಬ್ಲೂ ಎಸ್ ಎಸ್ ಬಿ ಗಾಡಿಗಳು ಅಗತ್ಯವಿರುತ್ತದೆ. ಸುಮಿತ್ರಮ್ಮ ಮನೆಯ ಹತ್ತಿರ 15ಅಡಿ ರಸ್ತೆಯಲ್ಲಿ ವಾಟರ್ ಲೈನ್ ಬದಲಾಯಿಸುವ ಬಗ್ಗೆ, ನಾಗರಬಾವಿ, ಮಲೈಮಹದೇಶ್ವರ ಬಡಾವಣೆಯಲ್ಲಿ ಬೋರ್‌ವೆಲ್ ಹಾಕುವ ಬಗ್ಗೆ, ಕೊಟ್ಟಿಗೆಪಾಳ್ಯದಲ್ಲಿ ಎರಡು ಬೋರ್‌ವೆಲ್‌ಗಳ ಅಗತ್ಯವಿರುತ್ತದೆ. ಈ ಮೇಲಿನ ಎಲ್ಲಾ ಸಮಸ್ಯೆಗಳನ್ನು ಅತಿ ಜರೂರಾಗಿ ಬಗೆಹರಿಸಿ ಉತ್ತರ ನೀಡಿ ಎಂದು ಮಾನ್ಯ ಸದಸ್ಯರು, ಬಿ ಡ್ಬ್ಲೂ ಎಸ್ ಎಸ್ ಬಿ ಸಹಾಯಕ ಕಾರ್ಯಪಾಲಕ ಅಭಿಯಂತರರು ವಿನಾಯಕ್ ರವರಿಗೆ ತಿಳಿಸಿರುತ್ತಾರೆ.

6 ಮುಂದುವರೆದು ಬೆಸ್ಕಾಂ ಕಿರಿಯ ಅಭಿಯಂತರರು ಶಂಕರ್‌ಲಿಂಗಯ್ಯ ರವರಿಗೆ, ರಾಮ್ ಮೆಡಿಕಲ್ಸ್ ಹತ್ತಿರ ವಿದ್ಯುತ್ ಕಂಬಗಳು ಅಗತ್ಯವಿರುತ್ತದೆ. ಶ್ರೀನಿವಾಸ್‌ನಗರ ವಿದ್ಯುತ್ ದೀಪಗಳು ಅಗತ್ಯವಿರುತ್ತದೆ, ಮಾಳಗಾಳ ಅಂಗನವಾಡಿ ಹತ್ತಿರ ವಿದ್ಯುತ್ ಕಂಬಗಳು ಅಗತ್ಯವಿರುತ್ತದೆ. ಈ ಮೇಲಿನ ಎಲ್ಲಾ ಸಮಸ್ಯೆಗಳನ್ನು ಅತಿ ಜರೂರಾಗಿ ಬಗೆಹರಿಸಿ ಉತ್ತರ ನೀಡಿ ಎಂದು ಮಾನ್ಯ ಸದಸ್ಯರು, ಸಹಾಯಕ ಅಭಿಯಂತರರು ಶೇಖರ್ ನಾಯಕ್ ರವರಿಗೆ ತಿಳಿಸಿರುತ್ತಾರೆ.

7 ಮುಂದುವರೆದು ಕಾಮಾಕ್ಷಿಪಾಳ್ಯ ಪೋಲೀಸ್ ಠಾಣೆ ಅಧಿಕಾರಿ ಶ್ರೀ ಕಾಳಿಂಗ ಮುತ್ತಯ್ಯ (ಎಎಸ್‌ಐ) ಕೊಟ್ಟಿಗೆಪಾಳ್ಯ ಮುಖ್ಯರಸ್ತೆ, ಉಡುಪಿ ಉಪಹಾರ ಹತ್ತಿರ ಧೂಮಪಾನ ರದ್ದು ಪಡಿಸುವ ಬಗ್ಗೆ. ಕೋವಿಡ್–19 ಸಂಬಂಧ ಸಂಘಟನೆಗಳ ಜೊತೆ ಕೈಜೊಡಿಸಲು ಸಂಘದ ಕಾರ್ಯಕರ್ತೆ ಕೋರಿರುತ್ತಾರೆ. ಈ ಮೇಲಿನ ಎಲ್ಲಾ ಸಮಸ್ಯೆಗಳನ್ನು ಅತಿ ಜರೂರಾಗಿ ಬಗೆಹರಿಸಿ ಉತ್ತರ ನೀಡಿ ಎಂದು ಮಾನ್ಯ ಸದಸ್ಯರು, ಶ್ರೀ ಕಾಳಿಂಗ ಮುತ್ತಯ್ಯ (ಎಎಸ್‌ಐ) ರವರಿಗೆ ತಿಳಿಸಿರುತ್ತಾರೆ.

8 ಈ ಮೇಲಿನ ವಿಷಯಗಳಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ ಎಲ್ಲಾ ಕೆಲಸಗಳು ನಿರ್ವಹಿಸುವಂತೆ ಹಾಗೂ ಮಾನ್ಯ ಅಧ್ಯಕ್ಷರು ಮತ್ತು ಕಾರ್ಯದ್ಯಕ್ಷರು ಸಮಿತಿ ಸಭೆಗೆ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ಸಭೆಗೆ ಹಾಜರಾಗುವಂತೆ ತಿಳಿಸಿ ವಂದನಾರ್ಪಣೆ ಮಾಡಿ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

–ಸಹಿ–

ಕಾರ್ಯದರ್ಶಿಗಳು ವಾರ್ಡ ಸಮಿತಿ

ವಾರ್ಡ ಸಂಖ್ಯೆ – 73

ಮ.ತಿ.ನೋ

ಪ್ರತಿಗಳನ್ನು:-

1. ಮಾನ್ಯ ಆಯುಕ್ತರ, ರವರ ಅವಗಾಹನೆಗೆ ಸಲ್ಲಿಸಲಾಗಿದೆ.
2. ವಾರ್ಡ್ ಸಂಖ್ಯೆ-73ರ ಸಮಿತಿ ಅಧ್ಯಕ್ಷರು.
3. ಮಾನ್ಯ ಜಂಟಿ ಆಯುಕ್ತರು, ರಾಜಾನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಲಾಗಿದೆ.
4. ಮಾನ್ಯ ಮುಖ್ಯ ಅಭಿಯಂತರರು, ರಾಜಾನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಲಾಗಿದೆ.
5. ಕೌನ್ಸಿಲ್ ಕಾರ್ಯದರ್ಶಿ, ರವರ ಅವಗಾಹನೆಗೆ ಸಲ್ಲಿಸಲಾಗಿದೆ.
6. ಕಾರ್ಯಪಾಲಕ ಅಭಿಯಂತರರು, ರಾಜಾನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಲಾಗಿದೆ.
7. ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ, ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ, ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
10. ಪೋಲೀಸ್ ಇನ್ಸಪೆಕ್ಟರ್, ಕಾಮಾಕ್ಷಿಪಾಳ್ಯ ಠಾಣೆ, ನಾಗರಬಾವಿ ರವರ ಮಾಹಿತಿಗಾಗಿ ಸಲ್ಲಿಸಿದೆ.

Naveen

ಕಾರ್ಯದರ್ಶಿಗಳು ವಾರ್ಡ ಸಮಿತಿ
ವಾರ್ಡ ಸಂಖ್ಯೆ – 73